ದಿನಾಂಕ : 22.02.2021 ರಂದು ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.

ಮುಂದುವರೆದ ಪಾಟೀ ಸವಾಲು : ಪ್ರತಿವಾದಿ ಪ**ರವಾಗಿ ಶ್ರೀ** ಎಸ್.ಆರ್ **ವಕೀಲರಿಂದ,**

ಪ್ರತಿವಾದಿಗೆ 25 ಎಕರೆ ಜಮೀನು ಇರಬಹುದು. ಅದು ನೀರಾವರಿ ಜಮೀನು. ನೀರಾವರಿ ಜಮೀನು ಇದ್ದರೇ ಬ್ಯಾಂಕ್ ನಲ್ಲಿ ಸಾಲ ಕೊಡುತ್ತಾರೆ ಎಂದರೆ ಸರಿ. ಆದ ಕಾರಣ ಖಾಸಗಿ ಮಂದಿಯಿಂದ ಸಾಲ ಪಡೆಯುವ ಅವಶ್ಯಕತೆ ಇಲ್ಲ ಎಂದರೆ ಸರಿಯಲ್ಲ. ಕಳೆದ ತಾರೀಖಿನಂದು ನಾನು ನನ್ನ ಸಾಕ್ಷಿಯಲ್ಲಿ ಹೇಳಿದ ಲೆಕ್ಕಾ ಪುಸ್ತಕವನ್ನು ಈ ದಿನ ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿ. ದಿನಾಂಕ 24.04.2016 ರಂದು ಪ್ರತಿವಾದಿಗೆ ನಾನು ಫ್ರಾಣೇಶಿ ಎನ್ನುವರ ಮನೆಯಲ್ಲಿ ಸಾಯಂಕಾಲ 4 ರಿಂದ 4:30 ಗಂಟೆಗೆ ಹಣ ಕೊಟ್ಟಿರುತ್ತೇನೆ. ಆ ದಿನ ನಾನು 500 ರೂ. ಮುಖಬೆಲೆಯ ನೋಟುಗಳನ್ನು ಕೊಟ್ಟಿರುತ್ತೇನೆ. ಒಟ್ಟು 5,15,000/- ರೂ.ಗಳು ಕೊಟ್ಟಿರುತ್ತೇನೆ. ಹಣ ಕೊಡುವಾಗ ನಾಗರೆಡ್ಡಿ ಮತ್ತು ಫ್ರಾಣೇಶಿ ಮತ್ತು ಮಲ್ಲಕಾರ್ಜುನ ಎನ್ನುವರು ಹಾಜರಿದ್ದರು. ಅವರನ್ನು ಹೊರತು ಪಡಿಸಿ ಬೇರೆ ಯಾರು ಅಲ್ಲಿ ಇರಲಿಲ್ಲ. ದಿನಾಂಕ 24.04.2016 ರಿಂದ ಎರಡು-ಮೂರು ದಿನ ಮುಂಚಿತವಾಗಿ ನಾನು ಹಣ ತಂದಿದ್ದೇನೆ. ಪ್ರತಿವಾದಿಯ ಗಂಡ ತೀರಿಕೊಂಡಿರುತ್ತಾರೆ. ಅವರು ಮನೆಯಲ್ಲಿ ಪ್ರತಿವಾದಿ ಹಾಗೂ ಅವರ ಇಬ್ಬರು ಮಕ್ಕಳು ವಾಸ ಇರುತ್ತಾರೆ. ಪ್ರತಿವಾದಿಯ ಮನೆಯಲ್ಲಿ ಬೇರೆ ಯಾರಾದರು ಹಿರಿಯರು ವಾಸ ಇರುತ್ತಾರೊ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿಯೂ ದಿನಾಂಕ 24.04.2016 ರಂದು ನನ್ನ 5,15,000/- ರೂ.ಗಳು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಫ್ರಾಸಂರಿ ನೋಟ್ ನ್ನು ನಾನು ಸುಳ್ಳಾಗಿ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯ ಗಂಡ ಮಾಡಿದ ವ್ಯವಹಾರಕ್ಕೆ ಸಂಬಂಧಿಸಿದಂತೆ ನಾನು ಬಲತ್ಕಾರದಿಂದ ಪ್ರತಿವಾದಿ ಹಾಗೂ ಅವರ ಮಗನ ಸಹಿಯನ್ನು ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ಯಾವತ್ತು ಸದರಿ ಸಾಲವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗೆ ಸಾಕಷ್ಟು ನೀರಾವರಿ ಜಮೀನು ಇರುವುದರಿಂದ ಸಾಲ ತೆಗೆದುಕೊಳ್ಳುವ ಅವಶ್ಯಕತೆ ಇರುವುದಿಲ್ಲ ಎಂದರೆ ಸರಿಯಲ್ಲ. ವ್ಯವಹಾರಗಳಲ್ಲಿ ಪ್ರತಿವಾದಿಯ ಗಂಡನ ವಿರುದ್ಧ ನನಗೆ ದ್ವೇಷ ಇರುವುದರಿಂದ ದ್ವೇಷ ಸಾಧಿಸಲು

ಪ್ರತಿವಾದಿಯ ವಿರುದ್ದ ಸುಳ್ಳು ದಾವೆಯನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ. ಬಡ್ಡಿ ವ್ಯವಹಾರ ಮಾಡಲು ಪರವಾನಗೆ ಇಲ್ಲದಿದ್ದರೂ ಸಹ ನಾನು ಸಾಕಷ್ಟು ಜನಕ್ಕೆ ಸಾಲ ಕೊಟ್ಟಿರುತ್ತೇನೆ ಎಂದರೆ ಸುಳ್ಳು. ನಾನು ಗಂಗಾರೆಡ್ಡಿ ಎನ್ನುವರ ಮೇಲೆ ಚೆಕ್ ಬೌನ್ಸ್ ಕೇಸು ಹಾಕಿರುತ್ತೇನೆ. ಅದನ್ನು ಮತ್ತು ಈ ದಾವೆಯನ್ನು ಹೊರತು ಪಡಿಸಿ ಬೇರೆ ಯಾವುದೇ ದಾವೆ ಅಥವಾ ಕೇಸು ಹಾಕಿರುವುದಿಲ್ಲ. ಗಂಗಾರೆಡ್ಡಿ ರವರ ವಿರುದ್ದ ಮಾಡಿದ ಚೆಕ್ಕು ಬೌನ್ಸ್ ಕೇಸು 9 ಲಕ್ಷದ ವ್ಯವಹಾರಕ್ಕೆ ಸಂಬಂಧಿಸಿದ್ದು ಇರುತ್ತದೆ. ಪ್ರತಿವಾದಿಯ ಸಹಿಗಳನ್ನು ದೌರ್ಜನ್ಯ ವಾಗಿ ಪಡೆದುಕೊಂಡು ಆಕೆಯ ಗಂಡನ ಮೇಲೆ ಇರುವ ದ್ವೇಷ ಸಾಧೀಸಲು ಸುಳ್ಳು ದಾವೆಯನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇಲ್ಲ,

*(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)*

ಓ ಹೇ ಕೇ ಸರಿ ಇದೆ

**2 ನೇ ಹೆ ಹಿ ಸಿವಿಲ್ ಜಡ್ಜ್, ಬಳ್ಳಾರಿ**